ಅನಂತರ ಮೊದಲೇ ಒಪ್ಪಂದ ಮಾಡಿಕೊಂಡಂತೆ ಅಂಗಡಿಯಲ್ಲಿ ಕನಿಷ್ಠ ಇನ್ನೂರು ರೂಗಳ ವ್ಯಾಪಾರ ಮಾಡಿಯೇ ಬಂದಿದ್ದು. ಅಂಗಡಿಯವರಿಗೆ ಸಾವಿರಾರು ರೂ.ಗಳ ವ್ಯಾಪಾರವಾಗಿತ್ತು. ಹೋಟೆಲ್ ಪ್ರಿಯರದ್ದೊಂದು ವಿಶಿಷ್ಟ ಜಾತಿ. ತಮ್ಮೂರಿನ ಯಾವ ಹೋಟೆಲ್‌ನಲ್ಲಿ ಏನು ಚೆನ್ನಾಗಿ ದೊರೆಯುತ್ತದೆಂಬುದು ಇವರಿಗೆ ಕಂಠಪಾಠ. ಅದೂ ಯಾವ ಸಮಯಕ್ಕೆ ಎಂಬುದೂ ಸರಿಯಾಗಿ ಗೊತ್ತು. ಬೆಳಗಾವಿಯ ಪುರೋಹಿತ ಕುಂದಾ, ಧಾರವಾಡದ ಲೈನ್ ಬಝಾರ್ ಪೇಡಾ, ಹುಬ್ಬಳ್ಳಿಯ ರೇಣುಕಾ ರೆಸ್ಟೋರೆಂಟಿನ ಮಿರ್ಚಿ, ದಾವಣಗೆರೆಯ ರಾಮೆಂಡ್ಕೊ ಸರ್ಕಲ್‌ನ ಸಾಗರ ಬೆಣ್ಣೆದೋಸೆ, ಮೈಸೂರಿನ ಮೈಸೂರು ಮೈಲಾರದ ದೋಸೆ, ಬೆಂಗಳೂರಿನ ವಿದ್ಯಾರ್ಥಿ ಭವನದ ಮಸಾಲೆ ದೋಸೆ, ಎಮ್.ಟಿ.ಆರ್.ನ ಪೂರಿ ಸಾಗು, ಬಿಸಿಬೇಳೆಭಾತು, ವೀಣಾ ಸ್ಟೋರ್ಸನ ಇಡ್ಲಿ, ಸಿ.ಟಿ. ಆರ್.ನ ಮಸಾಲೆ ದೋಸೆ, ಕೃಷ್ಣ ಭವನದ ಗ್ರೀನ್ ಇಡ್ಲಿ... ಹೀಗೇ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಹಾಗೆ ಇಲ್ಲಿ ಸರತಿ ಸಾಲೂ ಅಷ್ಟೇ ಉದ್ದ. ಮೊದಲೇ ರಿಸರ್ವ್ ಮಾಡಿಸಿ ಕಾಯಬೇಕು. ದೇವರ ದರ್ಶನವಾಗದಿದ್ದರೂ ಆಗಾಗ ಇವುಗಳ ದರ್ಶನವಾಗಿ ಪ್ರಸಾದವಾಗಲೇಬೇಕು. ಅಂದಾಗಲೇ ಮನೆ, ಮನ ತಣ್ಣಗಿರುವುದು. ವಾರ ಸುಸೂತ್ರವಾಗಿ ಸಾಗುವುದು. ಮೀಸಲಾತಿ, ಕೆಟಗರಿಗಳೆಲ್ಲ ಇದ್ದೇ ಇವೆಯಪ್ಪಾ. ಅಪರೂಪಕ್ಕೆ ಹೋಗುವವರ ವರ್ಗ ಬೇರೆ. ಮನೆಗೆ ಯಾರೇ ನೆಂಟರಿಷ್ಟರು ಬರಲಿ, ತಿಂಡಿ ಆರ್ಡರ್ ಆಗಿ ಬರುವವರ ಕೆಟಗರಿ ಬೇರೆ. ನಿತ್ಯ ಯಾತ್ರಿಗಳ ಪಥವೇ ಬೇರೆ. ಭಾನುವಾರ ಬೆಳಗಿನ ತಿಂಡಿ ಇಡ್ಲಿ ಬಂದು ಬಿಡುತ್ತದೆ. ಹೀಗಾಗಿ, ತಿಂಡಿ ಇಡ್ಲಿ ಎಂದಾಕ್ಷಣ, "ಗೃಹಲಕ್ಷ್ಮಿದಾ, ಹೊರಗಿನ ಮಹಾಲಕ್ಷ್ಮಿದಾ?" ಎಂದು ಕೇಳುವುದು ವಾಡಿಕೆ. ಶುಕ್ರವಾರ ಪಿಜ್ಜಾಹಟ್‌ನ ಆಫರ್ ಇರುವುದರಿಂದ ಅವು ತುಂಬಿ ತುಳುಕುತ್ತವೆ. ರಾತ್ರಿಯಾದರೆ ನಾರ್ತ್ ಇಂಡಿಯನ್, ಚೈನೀಸ್ ಕುಣಿದಾಡುತ್ತವೆ. 'ಅಲ್ಲಿಯವರೆಗೆ ಹೋಗುವವರಾರು?' ಎಂದು ಮನೆಗೆ ತರಿಸುವವರ ಸಂಖ್ಯೆಯೂ ಜಾಸ್ತಿಯೇ. ಮನೆಯಲ್ಲಿ ಹಿರಿಯ ಜೀವಗಳಿದ್ದರೆ ಅವರಿಗಿದು ಸಹ್ಯವಾಗುವುದಿಲ್ಲ. "ನಮಗೆ ಅಂಥದ್ದೆಲ್ಲ ಮೈಗಾಗುವುದಿಲ್ಲ" ಎಂದು ತಕರಾರು ತೆಗೆಯುತ್ತಾರೆ. ಗೃಹಿಣಿಗೆ ಕೋಪ. ಅವರಿಗಾಗಿ ಅಡಿಗೆ ಮಾಡಬೇಕಲ್ಲ, ಅಕಸ್ಮಾತ್ ತಿಂದರೂ ಮರುದಿನ ಹೊಟ್ಟೆನೋವೋ ಲೂಸ್ ಮೋಷನ್ನೋ ಆರಂಭವಾದರೆ ಮನೆಯಾಕೆಗೆ ತಲೆನೋವೇ.

ಕೆಲವು ಜನ ವಾಕಿಂಗ್, ಜಾಗಿಂಗ್ ಮಾಡುವವರು ಗಂಟೆಗಳವರೆಗೆ ಓಡಿ, ಬೆವರಿಳಿಸಿ ಬರುವಾಗ ಮಸಾಲೆ ದೋಸೆ, ವಡೆ ತಿಂದು ಬರುತ್ತಾರೆ. ಇಲ್ಲೊಂದು ವಾಕಿಂಗ್ ಗುಂಪಿದೆ. ವಾರವಿಡೀ ಬೆಳಗ್ಗೆ ಐದರಿಂದ ಏಳರವರೆಗೆ ವಾಕಿಂಗ್ ಮಾಡುತ್ತಾರೆ. ಭಾನುವಾರ ಮಾತ್ರ ಒಳ್ಳೆಯ ರೆಸ್ಟುರಾ ಹುಡುಕಿ ದಾಳಿಯಿಟ್ಟು ವಾರವಿಡೀ ಇಳಿಸಿದ್ದನ್ನು ಕತ್ತರಿಸುತ್ತಾರೆ. ಈಗಂತೂ ಬರ್ಥಡೇ, ಚಿಕ್ಕಪುಟ್ಟ ಸಮಾರಂಭಗಳು ಎಲ್ಲಕ್ಕೂ ಹೋಟಲ್ ಉತ್ತಮ ಆಯ್ಕೆಯಾಗಿದೆ. ಜೇಬಿನಲ್ಲಿ ದುಡ್ಡಿರಬೇಕಷ್ಟೆ.

ಒಂದಾನೊಂದು ಕಾಲದಲ್ಲಿ ಸಭ್ಯಸ್ಥರಿಗೆ, ಮಡಿವಂತರಿಗೆ ಹೋಟೆಲ್ ತುಂಬಾ ದೂರದ ಆಯ್ಕೆಯಾಗಿತ್ತು. ಅಜ್ಜ ಹೇಳುತ್ತಿದ್ದಂತೆ ಕೃಷ್ಣಪ್ಪನ ತುಪ್ಪದ ದೋಸೆ ಹೋಟೆಲ್ ಅಂದಿನ ಕಾಲದಲ್ಲಿ ಪ್ರಸಿದ್ಧವಾಗಿತ್ತು. ಅಲ್ಲೆಲ್ಲ ತಿನ್ನಲು ಬ್ರಾಹ್ಮಣರಿಗೆ ಮನೆಯಲ್ಲಿ ಅನುಮತಿ ಇರುತ್ತಿರಲಿಲ್ಲ. ಹಾಗೂ ಹೋಗಿ ತಿಂದು ಬಂದವರು ಮನೆಯ ಹೊರಗೇ ಸ್ನಾನ ಮಾಡಿ ಜನಿವಾರ ಬದಲಾಯಿಸಿ ಮನೆಯೊಳಗೆ ಬರಬೇಕಿತ್ತು. ಅದು ಇಡೀ ವಠಾರಕ್ಕೆ, ನೆರೆಕೆರೆಯ ಮನೆಗಳಿಗೆಲ್ಲ ಗೊತ್ತಾಗುತ್ತಿತ್ತು. ಅಂದಿನ ದಿನಗಳಿಗೂ ಇಂದಿನ ದಿನಗಳಿಗೂ ಅಜಗಜಾಂತರವಿದೆ. ಇಂದು ಹೋಟಲ್ ಉದ್ಯಮ ದೊಡ್ಡದಾಗಿ ಬೆಳೆದಿದೆ. ಹೋಟೆಲ್‌ಗೆ ಹೋಗದವರು ವಿಚಿತ್ರ ವ್ಯಕ್ತಿಗಳೆಂದೇ ಪರಿಗಣಿಸಲ್ಪಡುತ್ತಾರೆ. ಸಮಾಜ ಅದೆಷ್ಟೊಂದು ಬದಲಾಗಿದೆ.

ಹಾಗೇ ಇನ್ನೊಂದು ಸಿನಿಮಾ ಜಾತಿ. ಸಿನಿಮಾವನ್ನು ಉತ್ಕಟವಾಗಿ ಪ್ರೀತಿಸುವ... ಕಡಿಮೆ